ಅಧ್ಯಕ್ಷರು:– ಬೇಡ. ಅವರು ಕೇಳಲಿ. ನಿಮಗೆ ಸಂಬಂಧ ಇಲ್ಲ, ಬಿಡಿ. Please.

ಶೈಕ್ಷಣಿಕ ಗುಣಮೌಲ್ಯಗಳ ವರ್ಧನೆ

26(537); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿ ಪ್ರೌಢಶಾಲೆ ಮತ್ತು ಪಿ.ಯು.ಸಿ. ಶೈಕ್ಷಣಿಕ ಹಂತದಲ್ಲಿನ ಗುಣಮೌಲ್ಯ ವರ್ಧನೆಗಾಗಿ ಇಲಾಖೆಯ ಪರಿಣಾಮಕಾರಿ ಕಾರ್ಯಕ್ರಮಗಳು ಯಾವುವು; ಅವುಗಳ ಅನುಷ್ಠಾನಕ್ಕೆ ಅನುಸರಿಸುತ್ತಿರುವ ರೀತಿ ನೀತಿಗಳೇನು

ಆ) ಪ್ರಥಮ ಪಿ.ಯು.ಸಿ.ಗೆ ಪಬ್ಲಿಕ್ ಪರೀಕ್ಷೆ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ರಾಷ್ಟ್ರೀಯ ಮಟ್ಟದ ಶಿಕ್ಷಣ ವ್ಯವಸ್ಥೆಗೆ ಮಕ್ಕಳನ್ನು ತಯಾರುಗೊಳಿಸುವ ನಿಟ್ಟಿನಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿಯೂ ಮಕ್ಕಳು ಬೆಳೆಯಬೇಕೆಂಬ ಉದ್ದೇಶವನ್ನು ಈಡೇರಿಸಲು ಆಂತರಿಕ ಅಂಕಗಳ ನಿಗದಿ ಮತ್ತಿತರ ನಿರ್ಧಾರಿತ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ)

- ರಾಜ್ಯದಲ್ಲಿ ಪ್ರೌಢಶಾಲಾ ಶೈಕ್ಷಣಿಕ ಹಂತದಲ್ಲಿ ಗುಣಮೌಲ್ಯ ವರ್ಧನೆಗಾಗಿ ಇಲಾಖೆಯು Education Quality Monitoring Cell ಪ್ರಾರಂಭಿಸಿದ್ದು, ಅದರ ಅಡಿ 10 ಅಂಶಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳೆಂದರೆ ಸೇತುಬಂಧ, ಸಿಸಿಇ, ಆಪ್ತಸಲಹಾ ಕೇಂದ್ರ, ವಾರದ ವಿಜ್ಞಾನ ಪ್ರಯೋಗ, ವಿಷಯ ವೇದಿಕೆ, ಪುಸ್ತಕ ಪರಿಚಯ, ರಸಪ್ರಶ್ನೆ ಕಾರ್ಯಕ್ರಮ, ಇನಸ್ಪೈರ್ ಅವಾರ್ಡ್, ಐ.ಸಿ.ಟಿ., ಎನ್.ಟಿ.ಎಸ್.ಇ., ಎನ್.ಎಂ.ಎಂ.ಎಸ್ ಪರೀಕ್ಷೆಗಳು, ರಾಷ್ಟ್ರೀಯ

ಯುವ ಸಂಸತ್ತು, ಡಯಟ್ ಮೂಲಕ ತಂಡದಲ್ಲಿ ಶಾಲಾ ಭೇಟಿ ಇತ್ಯಾದಿಗಳು

- ಪ್ರೌಢಶಾಲಾ ಶಿಕ್ಷಕರಲ್ಲಿ ಶೈಕ್ಷಣಿಕ ಬಲವರ್ಧನೆ ಉಂಟುಮಾಡಲು ಸಲುವಾಗಿ ಹಾಗೂ ರಾಷ್ಟ್ರೀಯ ಪಠ್ಯ ಕ್ರಮ ಚೌಕಟ್ಟು 2005ರ ಮಾರ್ಗಸೂಚಿಗಳನ್ವಯ ಶಿಕ್ಷಣದಲ್ಲಿ ಗುಣಾತ್ಮಕ ಪ್ರಗತಿ ಸಾಧಿಸಲು ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳೆಂದರೆ ಪ್ರೌಢಶಾಲಾ ಶಿಕ್ಷಕರ ಶೈಕ್ಷಣಿಕ ಬಲವರ್ಧನೆ, ಶೈಕ್ಷಣಿಕ ಆಡಳಿತ ಬಲವರ್ಧನೆ, ಹೆಣ್ಣು ಮಕ್ಕಳ ಸ್ವರಕ್ಷಣಾ ಕೌಶಲ್ಯ, ಎಸ್.ಡಿ.ಎಂ.ಎಸಿ ತರಬೇತಿ ಇತ್ಯಾದಿ

2015 ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಸಿ.ಸಿ.ಇ. ಪದ್ಧತಿಯ ಅಳವಡಿಕೆ

ಸಿ.ಸಿ.ಇ ಪದ್ಧತಿಯ ಅಳವಡಿಕೆಯಲ್ಲಿ 4 ರೂಪಣಾತ್ಮಕ 2 ಸಂಕಲನಾತ್ಮಕ ಪರೀಕ್ಷಾ ಚಟುವಟಿಕೆಗಳಿವೆ. ರೂಪಣಾತ್ಮಕ ಮಾಪನದಲ್ಲಿ ವಿದ್ಯಾರ್ಥಿ ಸ್ವರಚಿತ 2 ಚಟುವಟಿಕೆಗಳು ಕಡ್ಡಾಯವಾಗಿರುತ್ತವೆ. ಇದರಿಂದಾಗಿ ವಿದ್ಯಾರ್ಥಿಯ ತಾರ್ಕಿಕ ಆಲೋಚನೆ, ಸ್ವತಂತ್ರ ಜ್ಞಾನ ಸಂಗ್ರಹಣೆ, ಮಾಹಿತಿಯನ್ನು ವಿವಿಧ ಮೂಲಗಳಿಂದ ಗಳಿಸಿಕೊಳ್ಳುವಿಕೆ, ತೀರ್ಮಾನ ಮತ್ತು ವರದಿ ತಯಾರಿ, ಸ್ವತಂತ್ರ ಅಭಿವ್ಯಕ್ತಿ, ಇತ್ಯಾದಿ ಅನ್ವಯ ಮತ್ತು ಕೌಶಲ ಆಧಾರಿತ ಆಯಾಮಗಳಿಗೆ ಅವಕಾಶ ಕಲ್ಪಿಸಲಾಗಿದೆ.

- ಸಹಪಠ್ಯಾಂಶಗಳಲ್ಲಿ (co-schoolastic activities) 100 ಅಂಕಗಳನ್ನು ನಿಗದಿಗೊಳಿಸಲಾಗಿದ್ದು, ಎ.ಬಿ.ಸಿ. ಶ್ರೇಣಿಗಳನ್ನು ಗುರುತಿಸಲಾಗಿದೆ. ಇದರಲ್ಲಿ ದೈಹಿಕ ಶಿಕ್ಷಣ, ಆರೋಗ್ಯ ಶಿಕ್ಷಣ, ಮನೋಭಾವನೆ ಮತ್ತು ಮೌಲ್ಯಶಿಕ್ಷಣ, ಕಾರ್ಯಾನುಭವ, ಕಲಾಕಲ್ಯಾಣ ವಿಷಯಗಳಿರುತ್ತವೆ.

- ಜಿಲ್ಲೆ ಮತ್ತು ತಾಲ್ಲೂಕು ಹಂತದ ಸಹಶಿಕ್ಷಕರಿಗೆ ಮಂಡಳಿವತಿಯಿಂದ ತರಬೇತಿ ನೀಡಲಾಗಿದೆ. ಪ್ರತಿಶಾಲೆಗೆ ಶಿಕ್ಷಕರ ಕೈಪಿಡಿ, ನೀಲಿನಕಾಶೆಗಳನ್ನು ನೀಡಲಾಗಿದೆ.

- ಕ್ಲಸ್ಟರ್ ಹಾಗೂ ತಾಲ್ಲೂಕು ಹಂತದಲ್ಲಿ ಪರಿಣಾಮಕಾರಿ ಅನುಷ್ಠಾನಕ್ಕಾಗಿ ತ್ರಿಸದಸ್ಯರ ಸಮಿತಿ ರಚನೆ.

- **ಕಲಿಕಾ ಮಾನಕಗಳ ಸಿದ್ಧತೆ (Learning Standards)**

– ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಎನ್.ಸಿ.ಎಫ್ 2005 ತತ್ವದ ಆಧಾರದ ಮೇರೆಗೆ ವಿದ್ಯಾರ್ಥಿಗಳಲ್ಲಿ ಬೆಳೆಯಬೇಕಾದ ಪರಿಕಲ್ಪನೆಗಳನ್ನು ನಿರ್ದಿಷ್ಟವಾಗಿ ಗುರುತಿಸಲಾಗಿದೆ.

– ಶ್ರೇಣೀಕೃತ ಕಲಿಕೆಯ ಅಂಶಗಳನ್ನು ಇದರಲ್ಲಿ ತರಗತಿವಾರು, ವಿಷಯವಾರು ಪ್ರತ್ಯೇಕ್ಷಿಸಿ ನೀಡಲಾಗಿದ್ದು, ಪ್ರತಿ ವಿದ್ಯಾರ್ಥಿಯು ಗರಿಷ್ಠಮಟ್ಟದಲ್ಲಿ ಕಲಿಕಾಂಶಗಳನ್ನು ಅರ್ಥೈಸಿಕೊಳ್ಳಲೇಬೇಕಿದೆ.

ರಾಜ್ಯದ ಪದವಿಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಶೈಕ್ಷಣಿಕ ಹಂತದಲ್ಲಿ ಗುಣಮೌಲ್ಯ ವರ್ಧನೆಗಾಗಿ 2013–14 ಮತ್ತು 2014–15ನೇ ಸಾಲಿಗೆ ಇಲಾಖೆಯ ಕಾರ್ಯಕ್ರಮಗಳು ಈ ಕೆಳಕಂಡಂತೆ ಇರುತ್ತದೆ

- **2013–14ನೇ ಶೈಕ್ಷಣಿಕ ಸಾಲಿನಲ್ಲಿ** ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 1200 ವಿಜ್ಞಾನ ವಿಷಯದ ಉಪನ್ಯಾಸಕರುಗಳಿಗೆ IISC Kudapura Challakere, Chitradurga ಇಲ್ಲಿ ತರಬೇತಿಯನ್ನು ನೀಡಲಾಗಿದೆ.

- ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ (1203), ಇಂಗ್ಲೀಷ್ (1230), ಇತಿಹಾಸ (1185), ಅರ್ಥಶಾಸ್ತ್ರ (1160), ರಾಜ್ಯಶಾಸ್ತ್ರ (1138), ಸಮಾಜಶಾಸ್ತ್ರ (998), ವ್ಯವಹಾರ ಅಧ್ಯಯನ (433), ಲೆಕ್ಕಶಾಸ್ತ್ರ (423), ಹಿಂದಿ (72) ಹಾಗೂ ಭೋಗಳಶಾಸ್ತ್ರ (107) ವಿಷಯಗಳ ಒಟ್ಟು

7934 ಉಪನ್ಯಾಸಕರುಗಳಿಗೆ ಪೂರ್ಣಾವದಿ ತರಬೇತಿಯನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಹಂತದಲ್ಲಿ ಜೂನ್ 2013 ರಿಂದ ಫೆಬ್ರವರಿ 2014ರ ವರೆಗೆ ತರಬೇತಿ ನೀಡಲಾಗಿದೆ.

- ಇಲಾಖೆಗೆ ಹೊಸದಾಗಿ ನೇಮಕವಾಗಿರುವ ಇಂಗ್ಲೀಷ್ (104), ಇತಿಹಾಸ (101), ಕನ್ನಡ (148), ಅರ್ಥಶಾಸ್ತ್ರ (138), ಸಮಾಜ ಶಾಸ್ತ್ರ (110), ರಾಜ್ಯಶಾಸ್ತ್ರ (65) ವಿಷಯಗಳ ಒಟ್ಟು 702 ಉಪನ್ಯಾಸಕರುಗಳಿಗೆ 04 ದಿನಗಳ ವಸತಿ ಸಹಿತ ವೃತ್ತಿ ಬುನಾದಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.12.2013 ರಿಂದ 21.02.2014 ರವರೆಗೆ ಬೆಂಗಳೂರು ಇಲ್ಲಿ ನಡೆಸಲಾಯಿತು.

- 2013–14ನೇ ಶೈಕ್ಷಣಿಕ ಸಾಲಿನಲ್ಲಿ ಪರಿಷ್ಕೃತ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ, ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಎಲೆಕ್ಟ್ರಾನಿಕ್ಸ್, ಗಣಕ ವಿಜ್ಞಾನ, ಲೆಕ್ಕಶಾಸ್ತ್ರ, ಭೂಗೋಳಶಾಸ್ತ್ರ, ಶಿಕ್ಷಣ ಶಾಸ್ತ್ರ, ವ್ಯವಹಾರ ಅಧ್ಯಯನ, ಹಿಂದಿ ಮತ್ತು ಸಂಸ್ಕೃತ ವಿಷಯಗಳ ಉಪನ್ಯಾಸಕರಿಗೆ ದಿನಾಂಕ 12.06.2013 ರಿಂದ 02.07.2013 ರವರೆಗೆ ಒಟ್ಟು (18 ದಿನಗಳು) ಒಂದು ದಿನದ ದೂರು ಸಂಪರ್ಕ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮವನ್ನು ನೀಡಲಾಗಿದೆ.

2014–15ನೇ ಶೈಕ್ಷಣಿಕ ಸಾಲಿನಲ್ಲಿ ಹಮ್ಮಿಕೊಂಡಿರುವ ತರಬೇತಿ ಕಾರ್ಯಕ್ರಮಗಳು

- ಇಲಾಖೆಗೆ ಹೊಸದಾಗಿ ನೇಮಕವಾಗಿರುವ ವಿಜ್ಞಾನ ವಿಷಯಗಳ ಒಟ್ಟು 900 ಉಪನ್ಯಾಸಕರುಗಳಿಗೆ 4 ದಿನಗಳ ವಸತಿ ಸಹಿತ ವೃತ್ತಿ ಬುನಾದಿ ತರಬೇತಿ ಕಾರ್ಯಕ್ರಮವನ್ನು ಆರ್.ಐ.ಇ.ಎಸ್.ಐ (Regional Institute of English south India) ಬೆಂಗಳೂರಿನಲ್ಲಿ

ದಿನಾಂಕ 09.06.2014 ರಿಂದ 18.06.2014 ರವರೆಗೆ ತರಬೇತಿಯನ್ನು ನಡೆಸಲಾಯಿತು.

ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹೊಸದಾಗಿ ನೇಮಕವಾಗಿರುವ ಭಾಷಾ, ಕಲಾ, ಮತ್ತು ವಾಣಿಜ್ಯ ವಿಷಯಗಳ ಒಟ್ಟು 456 ಉಪನ್ಯಾಸಕರುಗಳಿಗೆ 4 ದಿನಗಳ ವಸತಿ ಸಹಿತ ವೃತ್ತಿ ಬುನಾದಿ ತರಬೇತಿ ಕಾರ್ಯಕ್ರಮವನ್ನು ಆರ್.ಐ.ಇ.ಎಸ್.ಐ ಬೆಂಗಳೂರಿನಲ್ಲಿ ದಿನಾಂಕ 26.09.2014 ರಿಂದ 10.10.2014 ರವರೆಗೆ ತರಬೇತಿಯನ್ನು ನಡೆಸಲಾಯಿತು.

- 300 ಉಪನ್ಯಾಸಕರಿಗೆ ಮಾಸ್ಟರ್ ಟ್ರೈನರ್ ತರಬೇತಿ (Zonal Institute of Education Training) ಜಡ್.ಐ.ಇ.ಟಿ/ ಆರ್.ಐ.ಇ.ಎಸ್.ಐ (Regional Institute of English south India) ಬೆಂಗಳೂರುನಲ್ಲಿ ದಿನಾಂಕ 05.08.2014 ರಿಂದ 25.09.2014 ರವರೆಗೆ ನೀಡಲಾಗಿದೆ.

  ವಿಭಾಗ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ ಜಿಲ್ಲೆಗಳಲ್ಲಿ ವಿಜ್ಞಾನ ವಿಷಯಗಳ ಉಪನ್ಯಾಸಕರಿಗೆ ನೀಡಲಾಗಿದೆ.

- 2013–14ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಿಂದ ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶವು ಸುಧಾರಣೆ ಯಾಗಿದೆ ಹಾಗೂ 2014–15ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಿಂದ ಗುಣಮೌಲ್ಯ ವರ್ಧನೆಯಾಗುತ್ತದೆ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದಾಗಿದೆ.

ಆ) ಇಲ್ಲ

ಇ) 2014–15ನೇ ಸಾಲಿಗೆ ಸಿಸಿಇ ಪದ್ಧತಿಯನ್ನು 10ನೇ ತರಗತಿಗೂ ಜಾರಿಗೊಳಿಸಲಾಗಿದ್ದು, ಸಹಪಠ್ಯ ಚಟುವಟಿಕೆಗಳಲ್ಲಿ ನಾಲ್ಕು ವಿಷಯಗಳನ್ನು ದೈಹಿಕ ಮತ್ತು ಆರೋಗ್ಯ ಶಿಕ್ಷಣ, ಮನೋಭಾವನೆ ಮತ್ತು ಮೌಲ್ಯ ಶಿಕ್ಷಣ ಕಾರ್ಯಾನುಭವ ಮತ್ತು ಕಲಾಶಿಕ್ಷಣ ಗುರುತಿಸಲಾಗಿದೆ. ಆಂತರಿಕವಾಗಿ 04 ರೂಪಣಾತ್ಮಕ ಮೌಲ್ಯಮಾಪನಗಳನ್ನು ನಿರ್ವಹಿಸಲಾಗುತ್ತಿದೆ. ಒಟ್ಟಾರೆ ಕಾರ್ಯಶಿಕ್ಷಣದ ವಿಷಯಕ್ಕೆ 100 ಅಂಕಗಳನ್ನು ನಿಗಧಿಪಡಿಸಿದೆ. ಸಹಪಠ್ಯ ವಿಷಯಗಳಿಗೆ ಮಾತ್ರ ಶ್ರೇಣಿಗಳನ್ನು ನೀಡಲಾಗುತ್ತಿದೆ

ಸಹಪಠ್ಯ ವಿಷಯಗಳಿಗೆ ಸಂಬಂಧಿಸಿದ ಶ್ರೇಣಿಗಳ ವಿವರ	
ಅಂಕಗಳು	ಶ್ರೇಣಿ
80 ರಿಂದ 100	ಎ
50 ರಿಂದ 79 ರವರೆಗೆ	ಬಿ
30 ರಿಂದ 4 ರವರೆಗೆ	ಸಿ

ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಮಹತ್ವ ನೀಡಲಾಗಿದೆ. ಆ ಪ್ರಕಾರ N.S.S, N.C.C, Scouts, and Guides, Eco-Clubಗಳ ಮೂಲಕ ಕಾಲೇಜುಗಳ ಹಂತದಲ್ಲಿ ಪಠ್ಯೇತರ ಚಟುವಟಿಕೆಗಳನ್ನು ನಿಯಮಿತವಾಗಿ ನಡೆಸಲಾಗುತ್ತಿದೆ ಮತ್ತು ಈ ಮೂಲಕ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳಲ್ಲಿರುವ ಪ್ರತಿಭೆ ಮತ್ತು ಕೌಶಲ್ಯಗಳ ಅಭಿವ್ಯಕ್ತಿಗೆ ನಿರಂತರ ಅವಕಾಶ ಮಾಡಿಕೊಡಲಾಗಿದೆ. ಇದರ ಜೊತೆಗೆ ಜಿಲ್ಲಾ, ವಿಭಾಗೀಯ ಮತ್ತು ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಿ ಬಹುಮಾನಗಳನ್ನು ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಕಾಲೇಜು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮಲ್ಲಿರುವ ಪ್ರತಿಭೆಯ ಅಭಿವ್ಯಕ್ತಿ ಮತ್ತು ಸುಪ್ತವಾಗಿರುವ ಶಕ್ತಿ ಸಾಮರ್ಥ್ಯಗಳ ಸದ್ಬಳಕೆಗೆ ಸಹಾಯಕವಾಗುತ್ತದೆ. ಇದರ ಜೊತೆಗೆ ಕ್ರೀಡಾ ಸ್ಪರ್ಧೆಗಳನ್ನು ಸಹ ಕಾಲೇಜು ಮಟ್ಟದಿಂದ

ರಾಷ್ಟ್ರಮಟ್ಟದವರೆಗೆ ಆಯೋಜಿಸುತ್ತಿದ್ದು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಮತ್ತು ಅಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಮಾಡಿಕೊಡಲಾಗಿದೆ.

ಆದರೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕಾಗಿ ಆತಂರಿಕ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ.

ಶ್ರೀ ಹ್ಯಾರಿಸ್ ಎನ್.ಎ.:– ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ತಮಗೆ ಬಹಳ ವಿಶೇಷವಾದ ಅಭಿನಂದನೆಗಳು. ನಮ್ಮ ಈ ಸಭಾಂಗಣವನ್ನು ಬಹಳ ಚೆನ್ನಾಗಿ ಮಾಡಿದ್ದೀರಿ. ಬಹಳ ವಿಶೇಷವಾಗಿ ಮಾಡಿದ್ದೀರಿ. Congratulations ಅಧ್ಯಕ್ಷರೇ.

ಅಧ್ಯಕ್ಷರು:– ಅಷ್ಟೇ ಚೆನ್ನಾಗಿ ಉತ್ತರ ಬರಬೇಕು. ಕೆಲಸವೂ ಆಗಬೇಕು.

ಶ್ರೀ ಹ್ಯಾರಿಸ್ ಎನ್.ಎ.:– ಅಲ್ಲಿಗೇ ಬಂದೆ ಅಧ್ಯಕ್ಷರೆ.

ಅಧ್ಯಕ್ಷರು:– ಕೇವಲ ಇಷ್ಟು ಸುಂದರ ಮಾಡಿಕೊಂಡು ಕುಳಿತರೆ ಸಾಕಾಗುತ್ತದೆಯೇ?

ಶ್ರೀ ಹ್ಯಾರಿಸ್ ಎನ್.ಎ.:– ಒಂದೇ ಒಂದು small request.

ಅಧ್ಯಕ್ಷರು:– ಹೇಳಿ.

ಶ್ರೀ ಹ್ಯಾರಿಸ್ ಎನ್.ಎ.:– ನನಗೆ ಇಷ್ಟು ದೊಡ್ಡ ಉತ್ತರವನ್ನು ಈಗ ಕೊಟ್ಟಿದ್ದಾರೆ. ಇದನ್ನು ಓದುವುದಕ್ಕೆ ಕೂಡ ನನಗೆ ಸಮಯ ಸಾಕಾಗುವುದಿಲ್ಲ.

ಅಧ್ಯಕ್ಷರು:– ಒಂದು ಕೆಲಸ ಮಾಡಿ.

ಶ್ರೀ ಹ್ಯಾರಿಸ್ ಎನ್.ಎ.:– ಏಕೆ ನಿನ್ನೆಯೇ ನನಗೆ ಕೊಡಬಾರದು?

ಅಧ್ಯಕ್ಷರು:– ಬಹಳ ಮುಖ್ಯವಾದ ಪ್ರಶ್ನೆಯನ್ನು ನೀವು ಕೇಳಿದ್ದೀರಿ. ಇದನ್ನು ಸಾಮಾನ್ಯವಾಗಿ ಬೇಡಿಕೆ ಮೇಲೆ ಚರ್ಚೆಯಾಗುತ್ತದಲ್ಲ, ಆಗ ವಿಸ್ತಾರವಾಗಿ ನೀವು ಹೇಳುವುದಕ್ಕೆ ಅವಕಾಶವಿರುತ್ತದೆ.

ಶ್ರೀ ಹ್ಯಾರಿಸ್ ಎನ್.ಎ.:– ಒಪ್ಪಿಕೊಳ್ಳುತ್ತೇನೆ. ಆದರೆ, ನನ್ನ request ಏನೆಂದರೆ, ಈ ಉತ್ತರಗಳನ್ನು atleast ಒಂದು ದಿವಸ ಮೊದಲೇ ನಮಗೆ ಕೊಟ್ಟರೆ ನಾವು ಸ್ವಲ್ಪ prepare ಆಗಿ ಬರಬಹುದು.

ಅಧ್ಯಕ್ಷರು:– ಇಲ್ಲದಿದ್ದರೆ ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಬಿಡಿ.

ಶ್ರೀ ಹ್ಯಾರಿಸ್ ಎನ್.ಎ.:– ಎರಡು ವಿಷಯ ಕೇಳಿ ಬಿಡುತ್ತೇನೆ. ಆಮೇಲೆ ನೀವು ಬೇಕಾದರೆ ಬೇರೆ ರೂಪದಲ್ಲಿ ಕೊಡಿ.

ಅಧ್ಯಕ್ಷರು:– ಕೇಳಿ.

ಶ್ರೀ ಹ್ಯಾರಿಸ್ ಎನ್.ಎ.:– ಬಹಳಷ್ಟು ವಿಷಯಗಳನ್ನು ಮಂತ್ರಿಗಳು ಹೇಳಿದ್ದಾರೆ. ಆದರೆ, ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಂದರೆ ಇಡೀ ದೇಶದಲ್ಲಿ ಒಂದೇ standardನ ಶಿಕ್ಷಣವನ್ನು ತರುವಂಥ ಪ್ರಯತ್ನ ಕೇಂದ್ರಸರ್ಕಾರ ಮಾಡಿದೆ. ಅದೇನಾದರೂ ನಾವೂ ಕೂಡ ಮಾಡುತ್ತಿದ್ದೇವೆಯೇ ಎನ್ನುವುದು ಸನ್ಮಾನ್ಯ ಸಚಿವರೆ ನಿಮ್ಮ ಉತ್ತರದಲ್ಲಿಲ್ಲ. ಹಾಗೇ, ಇವತ್ತು ಏನಾಗುತ್ತಿದೆ ಎಂದರೆ, competitive exams ನಲ್ಲಿ ನಮ್ಮ ರಾಜ್ಯದಿಂದ ಬಹಳಷ್ಟು ಜನರಿಗೆ ಅದರಲ್ಲಿ ಭಾಗವಹಿಸಿ ಅದರಲ್ಲಿ ಬರಲಿಕ್ಕೆ ಅವಕಾಶಗಳು ಕಡಿಮೆಯಾಗುತ್ತಿವೆ. May be, because ನಮ್ಮ standard of education, quality of education ಕಡಿಮೆಯಾಗಿರುವುದರಿಂದ ಇರಬಹುದೆ?

ಅಧ್ಯಕ್ಷರು:– ಹ್ಯಾರಿಸ್‌ರವರೆ, ಹಾಗಲ್ಲ. ನೀವು ಕೇಳಿದ್ದಕ್ಕೆ ದೊಡ್ಡ ಉತ್ತರ ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಯಾವ ಕೊರತೆ ಇದೆ, ಆ ಕೊರತೆ ತುಂಬುವುದಕ್ಕೆ ಏನು ಮಾಡಬೇಕು ಎಂದು ಸರ್ಕಾರವನ್ನು ಕೇಳಿ.

ಶ್ರೀ ಹ್ಯಾರಿಸ್ ಎನ್.ಎ.:– ಇದರ ಬಗ್ಗೆ ಹೇಳಲಿಲ್ಲ. ನಾನು quality ಬಗ್ಗೆ ಕೇಳಿದ್ದೇನೆ. ಆ quality education ಬಗ್ಗೆ ಇವರು ಬೇಕಾದಷ್ಟು ಎಲ್ಲ ಹೇಳಿದ್ದಾರೆ.

ಅಧ್ಯಕ್ಷರು:– ಹೇಳಿದ್ದಾರೆ. ಅದರಲ್ಲಿ ಏನಾಗಬೇಕು ಹೇಳಿ.

ಶ್ರೀ ಹ್ಯಾರಿಸ್ ಎನ್.ಎ.:– ಇವಕ್ಕೆ ಅವು ಸಾಕಾಗುತ್ತಿಲ್ಲ.

ಅಧ್ಯಕ್ಷರು:– ಸರ್ಕಾರ ಏನು ಮಾಡಬೇಕು ಹೇಳಿ?

ಶ್ರೀ ಹ್ಯಾರಿಸ್ ಎನ್.ಎ.:– Teachersಗೆ training ಅನ್ನು ತಾವು ಕೊಡುತ್ತಿದ್ದೀರಿ. ಆ training ಕೂಡ ನಮ್ಮಲ್ಲಿರುವ ಆ standard ನಲ್ಲಿರುವವರೇ training ಕೊಡುವುದು. ನಾವು ಅದಕ್ಕೆ ಸ್ವಲ್ಪ ಇನ್ನೂ ಹೆಚ್ಚಿನ ರೀತಿಯಲ್ಲಿ training ಕೊಟ್ಟರೆ ಆ ಅಧ್ಯಾಪಕರು ಪಾಠ ಹೇಳಿಕೊಡಲಿಕ್ಕೆ ಇನ್ನಷ್ಟು ಅವರಿಗೆ ಅನುಕೂಲವಾಗುತ್ತದೆ. ಅದಲ್ಲದೆ, ನಾವು ಕೆಲವು studentsಗೆ exchange programmes, students ಅನ್ನು ಬೇರೆ ಶಾಲೆಗಳಿಗೆ ಅಂದರೆ ಬೇರೆ ರಾಜ್ಯಕ್ಕಿರಬಹುದು, ಬೇರೆ ದೇಶಕ್ಕೆ ಕಳುಹಿಸುವಂಥ programme ಏನಾದರೂ ಸಚಿವರೆ ನಮ್ಮಲ್ಲಿದೆಯೇ? ಹಾಗೆಯೇ, ಇವತ್ತು infrastructure plus technology, ನಾವು private ಶಾಲೆಗಳಿಗೆ ಹೋದರೆ interactive boards ಇರುತ್ತದೆ. Govermnent ಶಾಲೆಗಳಲ್ಲಿ ಅವು ಇನ್ನೂ ಬಂದಿಲ್ಲ. ಅವೆಲ್ಲ hi-tech ಇದನ್ನು ನಾವು ಉಪಯೋಗಿಸಿಕೊಂಡರೆ ನಮ್ಮ ಸರ್ಕಾರಿ ಶಾಲೆಗಳಲ್ಲಿ ಬರುವ ಮಕ್ಕಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ವಿದ್ಯಾಭ್ಯಾಸದ standard improve ಮಾಡಲಿಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು:– ಮಾನ್ಯ ಮಂತ್ರಿಯವರೆ, ಹೇಳಿ. ಅವರು ಮೂರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸೀಮಿತವಾಗಿ ಬೇಗ ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್:– ಅವರು ಕೇಳಿರತಕ್ಕಂಥ ಪ್ರಶ್ನೆ ಏನಿದೆ ಅದಕ್ಕೆ ಪೂರಕವಾಗಿರತಕ್ಕಂಥ ಎಲ್ಲ ವಿಷಯಗಳನ್ನು ನಾನು ಉತ್ತರದಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು:– ಬೇಡ. ಅವರು ಈಗ 3 ಪ್ರಶ್ನೆಯನ್ನು ಕೇಳಿದ್ದಾರೆ. ತರಬೇತಿ ಕೊಡುವಾಗ ಮೇಸ್ಟರಿಗೆ ಅವರಿಗಿಂತ ಹೆಚ್ಚಿನ ಜ್ಞಾನ ಇರಬೇಕು. ಮೂಲಭೂತ ಸೌಕರ್ಯದ ಕೊರತೆ ನೀಗಬೇಕು.

ಶ್ರೀ ಕಿಮ್ಮನೆ ರತ್ನಾಕರ್:– Actually ಅದನ್ನು ಮಾಡಿದ್ದೇವೆ. ಅವರು ಮೊದಲನೆಯದಾಗಿ ಒಂದು ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. Quality improve ಮಾಡುವುದಕ್ಕೇನು ಮಾಡಬೇಕೆಂದು ಎಂದರೆ DIET ಎನ್ನುವ separate department ಇದೆ. ಅದರ ಮೂಲಕ ಎಲ್ಲ ಶಿಕ್ಷಕರಿಗೂ ಕೂಡ ವರ್ಷದಲ್ಲಿ ಯಾವ್ಯಾವ ದಿನ ಕರೆದು ನಾವು training ಕೊಟ್ಟಿದ್ದೇವೆ ಎನ್ನುವುದನ್ನೂ ಕೂಡ ಹೇಳಿದ್ದೇವೆ. Training ಏನು ಕೊಡಬೇಕಾಗಿತ್ತು ಅದನ್ನು ಖಂಡಿತವಾಗಿ ಕೊಟ್ಟಿದ್ದೇವೆ. All India Education Policy ಏನಿದೆ 2009ರಲ್ಲಿ ಬಂದಿರತಕ್ಕಂಥ ಅನುಷ್ಠಾನವನ್ನು ಪರಿಪೂರ್ಣಗೊಳಿಸುವುದಕ್ಕೆ ಪೂರಕವಾಗಿ ಆಗಿಲ್ಲ. ಆದರೆ, ಹಂತ ಹಂತವಾಗಿ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇವೆ. That is, you are 100% correct. All Indian Education Policy ಯನ್ನೇನು ಮಾಡಿದ್ದಾರೆ ಇಲ್ಲಿ 7ನೇ class ಓದತಕ್ಕಂಥ ಮಗು ಅಥವಾ ಉತ್ತರ ಪ್ರದೇಶದಲ್ಲಿ ಓದತಕ್ಕಂಥ ಮಗುವಿಗೂ ಕೂಡ ಒಂದೇ ರೀತಿಯ standard syllabus ಇರಬೇಕೆನ್ನತಕ್ಕಂಥದ್ದು 2009ರಲ್ಲಿ ಬಂದಿರತಕ್ಕಂಥ ಒಂದು ಕಾಯ್ದೆ. ಆ ಕಾಯ್ದೆಗನುಗುಣವಾಗಿ ಹಂತ ಹಂತವಾಗಿ ನಾವು ಎಲ್ಲ ಪ್ರಯತ್ನಗಳನ್ನು ಮಾಡಿಕೊಂಡು ಬಂದಿದ್ದೇವೆ. ಹಂತ ಹಂತವಾಗಿ ಅದೇರೀತಿ ಮಾಡಿದ್ದೇವೆ. ಅದೇರೀತಿ ಅವರು ಇನ್ನೊಂದು ಪ್ರಶ್ನೆ ಕೇಳಿದ್ದಾರೆ. ಪ್ರಥಮ PUC ಗೆ ತಾವು ಪರೀಕ್ಷೆ ಮಾಡುತ್ತೀರಾ ಎಂದು ಕೇಳಿದ್ದಾರೆ. ವಾಸ್ತವದಲ್ಲಿ ಆ ಪ್ರಸ್ತಾವನೆ ನಮ್ಮ ಸರ್ಕಾರದ ಮುಂದಿಲ್ಲ. ಚರ್ಚೆ ನಡೆಯುತ್ತಿದೆ. ವಿದೇಶ ಪ್ರವಾಸ ಆ ರೀತಿಯಾದ ಯೋಚನೆಗಳನ್ನು ನಾವು ಇಟ್ಟುಕೊಂಡಿಲ್ಲ. ಆ ರೀತಿಯ ಯೋಜನೆಗಳು ಸರ್ಕಾರದ ಮುಂದಿಲ್ಲ.

ಶ್ರೀ ಹ್ಯಾರಿಸ್ ಎನ್.ಎ.:– Technology ಉಪಯೋಗಿಸುವ ಬಗ್ಗೆ ತಾವೇನೂ ಹೇಳಲಿಲ್ಲ.

ಅಧ್ಯಕ್ಷರು:– ಯಾವುದು?

ಶ್ರೀ ಹ್ಯಾರಿಸ್ ಎನ್.ಎ.:– Interactive Boards. ಇವತ್ತು class room ನಲ್ಲಿ ಮಾಡುವಂತಹದು.

ಶ್ರೀ ಕಿಮ್ಮನೆ ರತ್ನಾಕರ್:– ಅವರು ಹೇಳುತ್ತಿರುವುದು ಏನೆಂದರೆ, smart class ಅನ್ನು introduce ಮಾಡುವುದಕ್ಕೆ ಹೇಳುತ್ತಿದ್ದಾರೆ. ಅದರ cost ತುಂಬಾನೇ ಇದೆ. ನಾವು ಈಗೇನು ಮಾಡುತ್ತೇವೆಂದರೆ, public participation ನಲ್ಲಿ ಏನೇನು ಮಾಡಲಿಕ್ಕಾಗುತ್ತದೆ, ಆ ಪ್ರಯತ್ನ ಮಾಡುತ್ತಿದ್ದೇವೆ. ಹಂತ ಹಂತವಾಗಿ ಮಾಡುತ್ತಿದ್ದೇವೆ.

ಅಧ್ಯಕ್ಷರು:– ಹ್ಯಾರಿಸ್‌ರವರೆ, ಒಂದು ವಿಷಯ ಹೇಳುತ್ತೇನೆ, ಕೇಳಿ. ಇದು ವಿಸ್ತಾರವಾದಂಥ ಒಂದು ವಿಷಯವಿದೆ. ದಯವಿಟ್ಟು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ. ಚರ್ಚೆ ಮಾಡೋಣ.

ಶ್ರೀ ಹ್ಯಾರಿಸ್ ಎನ್.ಎ.:– ಅರ್ಧ ಗಂಟೆಗೆ ಕೊಟ್ಟುಬಿಡಿ ಸಾರ್ ತಾವೇ.

ಅಧ್ಯಕ್ಷರು:– ಈಗ ಉತ್ತರ ಹೇಳುವುದಕ್ಕಾಗುವುದಿಲ್ಲ. ಬಹಳ ದೊಡ್ಡದಿದೆ.

ಶ್ರೀ ಹ್ಯಾರಿಸ್ ಎನ್.ಎ.:– Half an hour ತಾವು ಕೊಡಿ ಸಾರ್. ಅರ್ಧ ಗಂಟೆ ಚರ್ಚೆ ಮಾಡೋಣ.

ಅಧ್ಯಕ್ಷರು:– ಅದಕ್ಕೆ ಬೇಕಾದರೆ ಕೊಡುತ್ತೇನೆ.

ಶ್ರೀ ಹ್ಯಾರಿಸ್ ಎನ್.ಎ.:– ಅರ್ಧ ಗಂಟೆ ಅವಕಾಶ ಕೊಡಿ.

ಅಧ್ಯಕ್ಷರು:– O.K. ಅರ್ಧ ಗಂಟೆ ಚರ್ಚೆಗೆ ಕೊಡೋಣ.